Sri G. M. MANJANATHAYA.—In view of the fact that a number of irrigation tank works have been investigated, will the Government consider the feasibility of taking up more works during the year ?

Sri ALUR HANUMANTHAPPA.—I just now stated that nearly 43 estimates have already been sanctioned and the remaining 9 works of restoration of tanks will be taken up in due course.

ಅಧ್ಯಕ್ಷರು.—ಮಾನ್ಯ ಸದಸ್ಯರು ಸಭೆಯಲ್ಲಿ 34ನೆಯ ಪ್ರಶ್ನೆಯನ್ನು ಹಾಕಲಿಕ್ಕೆ ಹಾಜರಿಲ್ಲ. 55ನೆಯ ಪ್ರಶ್ನೆ ಹಾಕಬಹುದು.

Mid-day Meal Scheme.

55. **Sri N. L. BELLAD** (Ranibennur).—

Will the Minister for Education be pleased to state :—

(*a*) whether it has come to their notice that it has not become possible for the teachers of the primary school to give their attention towards teaching due to exertion and waste of time as they have been entrusted with the accomplishment of mid-day meal Scheme ;

(*b*) whether they are aware that in other States the responsibility of accomplishing the mid-day meal scheme has been entrusted to the Panchayat Committee or the local bodies ;

(*c*) whether they intend to follow the same procedure here also ;

A.—**Sri K. V. SHANKARA GOWDA** (Minister for Education).—

(*a*) No.

(*b*) No.

(*c*) Does not arise.

ಶ್ರೀ ಎನ್. ಎಲ್. ಬೆಲ್ಲದ್.—ನಮ್ಮರಾಜ್ಯದಲ್ಲಿ ಪ್ರಾಥಮಿಕ ಶಾಲಾಮಕ್ಕಳಿಗೆ ಮಧ್ಯಾಹ್ನ ಉಪಹಾರ ಕೊಡತಕ್ಕ ಪದ್ಧತಿ ಜಾರಿಯಲ್ಲದೆ ಎಂಬುದು ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಕೆ. ವಿ. ಶಂಕರ ಗೌಡ.—ಗೊತ್ತಿದೆ.

ಶ್ರೀ ಎನ್. ಎಲ್. ಬೆಲ್ಲದ್.—ಅದನ್ನು ಕಾರ್ಯಗತಮಾಡಲು ಅಯಾಯಾ ಶಾಲಾ ಶಿಕ್ಷಕರಿಗೇ ಅದನ್ನು ವಹಿಸಲಾಗಿದೆ ಎಂಬುದು ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಕೆ. ವಿ. ಶಂಕರ ಗೌಡ.—ಶಾಲಾ ಶಿಕ್ಷಕರಿಗೆ ವಹಿಸಿಲ್ಲ. ಅದನ್ನು ಬೆಳವಣಿಗೆ ಕಮಿಟಿಗೆ ವಹಿಸಿರಾಗಿದೆ.

ಶ್ರೀ ಎನ್. ಎಲ್. ಬೆಲ್ಲದ್.—ಹಾಲಿ ಈ ದಿವಸ ಆ ಶಾಲಾ ಉಪಾಧ್ಯಾರುಗಳೇ ಅದರ ವ್ಯವಸ್ಥೆ ಮತ್ತು ರೆಕ್ಕಪತ್ರಗಳನ್ನೆಲ್ಲಾ.....

ಅಧ್ಯಕ್ಷರು.—ಯಾವುದಾದರೂ ಒಂದು ಉದಾಹರಣೆಯನ್ನು ಕೊಟ್ಟು ಇಂಥಾ ಶಾಲೆಯಲ್ಲ ಅಂತಹೇಳಿ.

ಶ್ರೀ ಎನ್. ಎಲ್ ಬೆಲ್ಲದ್.—ಒಂದು ಶಾಲೆಯಲ್ಲೇ ಅಲ್ಲ, ಎಲ್ಲಾ ಶಾಲೆಗಳಲ್ಲೂ ಉಪಾಧ್ಯಾಯರುಗಳೇ ಅದನ್ನು ನಡೆಸುತ್ತಿಲ್ಲವೆ ?

Sri K. V. SHANKARA GOWDA. –Normally, this work is entrusted to the School Betterment Committees, and where the Committees are not effectively working, the teachers will look after it.

ಶ್ರೀ ಮಹದೇವ ಜಿ. ಬಣಕಾರ್.—ಮಧ್ಯಾಹ್ನದ ಉಪಹಾರಗಳನ್ನು ಕೊಡುವುದರಲ್ಲಿ ಅದಕ್ಕೆ ಕೊಡುವ ನರಕುಗಳಲ್ಲಿ ಬೆಟರ್‌ಮೆಂಟು ಕಮಿಟಿಯವರಿಗೆ ಹಾಗೂ ಶಿಕ್ಷಕರುಗಳಲ್ಲಿ ಸರಿಯಾದ ಹೊಂದಾಣಿಕೆ ಇಲ್ಲವೆ ಇಂತಹಗೊಂದಲವುಯು ವಾತಾವರಣ ಉಂಟಾಗುತ್ತಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ವಿ. ಶಂಕರ ಗೌಡ.—ಅಂತಹದೇನೂ ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಪಿ. ಚಿಕ್ಕೇಗೌಡ.—ಬೆಟರ್‌ಮೆಂಟ್ ಕಮಿಟಿಯವರು ಉಪಹಾರಗಳನ್ನು ಹಂಚುವುದಕ್ಕಾಗಿ ಅನೇಕ ಶಾಲೆಗಳಲ್ಲಿರುವ ಶಿಕ್ಷಕರು ಒಂದು ಅಡಿಗೆಮನೆಯಾಗಿಯೇ ಪರಿವರ್ತಿಸಿಕೊಂಡು ಕೆಲಸ ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ವಿ. ಶಂಕರ ಗೌಡ.—ಅಂತಹದೇನೂ ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಎಚ್. ಬಿ. ಪ್ಯಾಲನ್ಯ.—ಮಧ್ಯಾಹ್ನದ ಉಪಹಾರಕ್ಕಾಗಿ ಮಿಲ್ಕ್‌ಪೌಡರುಗಳನ್ನು ಕೊಟ್ಟಿರುವುದು ದುರುಪಯೋಗವಾಗಿದೆ ಎಂದು ಸರಕಾರಕ್ಕೇನಾದರೂ ದೂರುಗಳು ಬಂದಿವೆಯೇ ?

ಶ್ರೀ ಕೆ. ವಿ. ಶಂಕರ ಗೌಡ.—ಅಂತಹದೇನೂ ಬಂದಿಲ್ಲ.

ಶ್ರೀ ಎಂ. ನಾಗಪ್ಪ—ಬೆಟರ್‌ಮೆಂಟು ಕಮಿಟಿಯಲ್ಲಿ ಸೆಕ್ರೆಟರಿಗಳಾಗಿ ಕೆಲಸ ಮಾಡುತ್ತಿರುವವರು ಆಯಾ ಶಾಲೆಯ ಮುಖ್ಯೋಪಧ್ಯಾಯರುಗಳೇ ಅಲ್ಲವೇ ?

ಶ್ರೀ ಕೆ. ವಿ. ಶಂಕರ ಗೌಡ.—ಹೌದು.

ಶ್ರೀ ಎಂ. ನಾಗಪ್ಪ.—ಹಾಗಿದ್ದರೆ ಆ ಮುಖ್ಯೋಪಧ್ಯಾಯರುಗಳೇ ಅಲ್ಲವೇ ಎಲ್ಲ ಲೆಕ್ಕ ಪತ್ರಗಳನ್ನು ಇಡುವವರು ? ಇದರಿಂದಾಗಿಯೇ ಇಲ್ಲದ ಗೊಂದಲಗಳಿಗೆ ಕಾರಣವಾಗುತ್ತಿದೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ವಿ. ಶಂಕರ ಗೌಡ.—ಲೆಕ್ಕ ಪತ್ರಗಳನ್ನು ಇಡಬೇಕೆಂದು ಅವರಿಗೇ ವಹಿಸಲಾಗಿದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಈ ಉಪಾಹಾರಗಳನ್ನು ತಯಾರು ಮಾಡುವ ಕೆಲಸಗಳನ್ನು ಉಪಾಧ್ಯಾಯರುಗಳಿಗೆ ಕೊಡುವುದಕ್ಕೆ ಬದಲಾಗಿ ಆಯಾ ತಾಲ್ಲೂಕ್ ಬೋರ್ಡುಗಳಿಗೆ ಹಾಗೂ ಪಂಚಾಯಿತಿಗಳಿಗೆ ವಹಿಸಿಕೊಟ್ಟರೆ ಇಂತಹ ಬೆಟರ್‌ಮೆಂಟು ಕಮಿಟಿಗಳನ್ನು ಮಾಡುವ ಅಗತ್ಯವಿಲ್ಲ ಎಂದು ಸರಕಾರಕ್ಕೆ ತೋರುವುದಿಲ್ಲವೇ ?

ಶ್ರೀ ಕೆ. ವಿ. ಶಂಕರ ಗೌಡ.—ಇದು ಸಾಧ್ಯವಿಲ್ಲ. ಇದಕ್ಕಾಗಿಯೇ ಪ್ರತಿಯೊಂದು ಶಾಲೆಯಲ್ಲಿಯೂ ಪ್ರತ್ಯೇಕವಾದ ಬೆಟರ್ ಕಮಿಟಿಗಳೆಂದು ಮಾಡಲಾಗಿದೆ ಮತ್ತು ಈ ಕಮಿಟಿಗಳು ಸಮರ್ಪಕವಾಗಿ ಕೆಲಸಗಳನ್ನು ಮಾಡುತ್ತಿದೆ. ಆದರೆ ಎಲ್ಲ ಕಡೆಗಳಲ್ಲಿಯೂ ಇಂತಹ ಕಮಿಟಿಗಳು ಕೆಲಸ ಮಾಡುವಾಗ ಕೆಲವು ಕಡೆಗಳಲ್ಲಿ ಸರಿಯಾಗಿ ಕೆಲಸ ನಡೆಯದೇ ಇರಬಹುದು. ಆದರೆ ಎಲ್ಲ ಕಡೆಗಳಲ್ಲಿಯೂ ಇರುವ ಉಪಾಧ್ಯಾಯರುಗಳೇ ಇದರಲ್ಲಿ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ಮತ್ತು ಇದನ್ನು ನೋಡಿಕೊಳ್ಳುತ್ತಿದ್ದಾರೆ.

ಶ್ರೀ ಎಚ್. ಎನ್. ನಂಜೇಗೌಡ.—ಕೆಲವು ಶಾಲೆಗಳಲ್ಲಿರುವ ಅಧ್ಯಾಪಕರುಗಳೇ ಅಲ್ಲಿಗೆ ಕಳುಹಿಸಿ ಕೊಡುತ್ತಿರುವ ಹಾಲನ ಪುಡಿಗಳನ್ನು ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರಾಟ ಮಾಡುತ್ತಿದ್ದಾರೆ ಎಂದು ಸರಕಾರಕ್ಕೆ ಈ ಸಭೆಯ ಸದಸ್ಯರು ಯಾರಾದರೂ ದೂರುಗಳನ್ನು ಕೊಟ್ಟಿರುತ್ತಾರೆಯೆ ?

ಶ್ರೀ ಕೆ. ವಿ. ಶಂಕರ ಗೌಡ.—ಯಾರೂ ಅಂತಹ ದೂರುಗಳನ್ನು ಕೊಟ್ಟಿಲ್ಲ. ಇದರಲ್ಲಿ ಏನಾಗಿದೆ ಎಂದರೆ, ಶೇಕಡಾ ನೂರರಲ್ಲಿ ತೊಂಬತೊಂಬತ್ತು ಭಾಗ ಶಾಲೆಗಳು ದುರುಪಯೋಗ ಮಾಡಿಲ್ಲ. ಆದರೆ ಒಂದೆರಡು ಪ್ರಸಂಗಗಳಲ್ಲಿ ದುರುಪಯೋಗಗಳಾಗಿವೆ. ಸರಕಾರಕ್ಕೆ ದೂರು ಬಂದಕೂಡಲೇ ಅಂತಹವರ ಮೇಲೆ ಉಗ್ರ ಕಾರ್ಯಕ್ರಮವನ್ನು ತಕ್ಷಣ ತೆಗೆದುಕೊಳ್ಳಲಾಗಿದೆ.

ಶ್ರೀ ಎಚ್. ಎನ್. ನಂಜೇ ಗೌಡ.—ಕೆಲವು ಮಾನ್ಯ ಸದಸ್ಯರು ಇದರ ಬಗ್ಗೆ ಒಂದು ರಿಪೋರ್ಟನ್ನು ಸರಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಇದರ ಬಗ್ಗೆ ಸರಕಾರ ಗಮನ ತೆಗೆದುಕೊಂಡಿದೆಯೆ ?

ಶ್ರೀ ಕೆ. ವಿ. ಶಂಕರ ಗೌಡ.—ಇದನ್ನು ವಿಚಾರಣೆ ಮಾಡುತ್ತೇನೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಕೆಲವು ಕಡೆಗಳಲ್ಲಿ ಉಪಾಹಾರಗಳನ್ನು ಕೊಡುವಾಗ ಹಾಲಿನ ಪೌಡರುಗಳನ್ನು ಕೊಡುವುದಕ್ಕೆ ಬದಲಾಗಿ ಪ್ರಿಪೇರ್ಡ್ ಪುಡ್‌ನ್ನು ಎಂದೆ ಹಾಲನ್ನು ಗೋಧಿ ಹಿಟ್ಟಿನಲ್ಲಿ ಬೆರಸಿ ಮಾಡಿದ ಪದಾರ್ಥಗಳನ್ನು ಹಂಚುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ವಿ. ಶಂಕರ ಗೌಡ.—ಎಲ್ಲೋ ಕೆಲವು ಕಡೆ ಪ್ರಾಯೋಗಿಕವಾಗಿ ಇಂತಹ ಪ್ರಿಪೇರ್ಡ್ ಪುಡ್ ಕೊಡಲಾಗುತ್ತಿದೆ. ಎಲ್ಲ ಕಡೆಗಳಲ್ಲಿಯೂ ಕೊಡುತ್ತಿಲ್ಲ.

ಶ್ರೀ ಎಸ್. ಎಸ್. ಅರಕೇರಿ.—ಮಿಡ್ ಡೇ ಮಿಲ್ಸ್ ಸ್ಕೀಂ ಎಂದು ಸರಕಾರ ತಂದಿರುವುದರಲ್ಲಿ ಬ್ಲಾಕ್ ಮಾರ್ಕೆಟ್ ಹೆಚ್ಚು ಮಾಡಲು ಅವಕಾಶವಾಗಿದೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ವಿ. ಶಂಕರ ಗೌಡ.— ಇದು ಮಾನ್ಯ ಸದಸ್ಯರ ಕಲ್ಪನೆಯಾಗಿದೆ.

Sri J. P. SARVESH,—Due to non-supply of sugar, the students are throwing away the milk. Will the Government consider this nd supply the sugar ?

ಶ್ರೀ ಕೆ. ವಿ. ಶಂಕರ ಗೌಡ.—ಹಾಲಿಗೆ ಸಕ್ಕರೆ ಇಲ್ಲದೆ ಹಾಗೇ ಕೊಡುವುದು ಒಳ್ಳೆಯದು. ಆಯಾ ತಾಲ್ಲೂಕಾ ಬೋರ್ಡಗಳವರು ಇಲ್ಲವೇ ಪಂಚಾಯಿತಿಗಳವರು ಇದಕ್ಕಾಗಿ ಬೇಕಾಗುವ ಸಕ್ಕರೆಯನ್ನು ಕೊಡಬೇಕೆಂದು ವ್ಯವಸ್ಥೆ ಇದೆ. ಡಾಕ್ಟರುಗಳೂ ಕೂಡ ಸಕ್ಕರೆ ಇಲ್ಲದೆ ಹಾಲನ್ನು ಕೊಡಬಹುದು ಎಂದು ಹೇಳುವುದು ಮಾನ್ಯ ಸದಸ್ಯರಿಗೂ ಗೊತ್ತಿರಬಹುದು.

Shifting of L. F. Dispensary

56. **Sri B. PARAMESWARAPPA** (Holalkere).—

Will the Minister for Health and Housing be pleased to state :—

(*a*) the action taken by the Government to shift the L. F. Dispensary from Holalkere to Muthugadur village as the Taluk Board has resolved to shift the same to Muthugadur long back ;

(*b*) the reasons for the delay ?

A.—**Sri K. PUTTASWAMY** (Minister for Health and Housing).—

(*a*) Government do not propose to shift the L. F. Dispensary to Muthugadur as it lies in a population block of 15,000 where there is already a L. F. Dispensary at Baramanayakandurga which is at a distance of 3 miles only from Muthugadur.

(*b*) Does not arise in view of answer to (*a*) above.

ಶ್ರೀ ಬಿ. ಪರಮೇಶ್ವರಪ್ಪ.—ಹೊಳಲ್ಕೆರೆಯಿಂದ ಮುತ್ತುಗದೂರು ಗ್ರಾಮಕ್ಕೆ ಇಲ್ಲಿರುವ ಆಸ್ಪತ್ರೆಯನ್ನು ಸ್ಥಳಾಂತರಿಸುವ ಬಗ್ಗೆ ಶಿಫಾರಸು ಮಾಡಿ ಡಿಸ್ಟ್ರಿಕ್ ಹೆಲ್ತ್ ಆಫೀಸರು ಸರಕಾರಕ್ಕೆ ಮಾಡಿದ್ದರೂ ಅದನ್ನು ಮಾಡುವ ಅಗತ್ಯವಿಲ್ಲ ಎಂದು ಇಲ್ಲಿ ಹೇಳಲು ಕಾರಣಗಳೇನು ? ಮುತ್ತು ಇಲ್ಲಿನ ಜನರ ಸಂಖ್ಯೆ ಕೂಡ 15 ಸಾವಿರಕ್ಕೆ ಮೇಲ್ಪಟ್ಟು ಇದೆ.

ಶ್ರೀ ಕೆ. ಪುಟ್ಟಸ್ವಾಮಿ.—ಇಲ್ಲಿ ತಾಲೂಕಾವಾರು ವಿಂಗಡಣೆ ಮಾಡಿಲ್ಲ. ನಮ್ಮ ಸರ್ಕಾರದ ನೀತಿ ಪ್ರಕಾರ ಪ್ರತಿಯೊಂದು ಬ್ಲಾಕಿಗೂ ಕನಿಷ್ಟ ಪಕ್ಷ ಒಂದು ಪಾಶ್ಚಾತ್ಯ ಔಷಧಿ ಕೊಡತಕ್ಕಂಥ ಒಂದು ಆಸ್ಪತ್ರೆಯನ್ನು ಕೊಡಬೇಕು ಎಂದು ಇದೆ. ಈಗ 6 ಬ್ಲಾಕ್‌ನಲ್ಲಿ ಒಂದೊಂದು ಆಸ್ಪತ್ರೆ ಇದೆ. ಕೆಲವು ಬ್ಲಾಕುಗಳಲ್ಲಿ ಹೆಚ್ಚು ಇದೆ, ಹೊಳಲ್ಕೆರೆ ತಾಲ್ಲೂಕಿನಲ್ಲಿ 9 ಆಸ್ಪತ್ರೆಗಳು ಇವೆ ಎಂದು ಮಾನ್ಯ ಸದಸ್ಯರು ಹೇಳುತ್ತಾರೆ. ಬರಮನಾಯಕನದುರ್ಗ ಮತ್ತು ಮುತ್ತುಗದೂರಿಗೂ 3 ಮೈಲಿ